## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಸತ್ಯಾತ್ಮರು ಹೇಳಿದ ಸುಳ್ಳುಕಥೆ | 2 |
| ಸತ್ಯಾತ್ಮರ ಕುರಿತು ಒಂದು ಸ್ಪಷ್ಟೀಕರಣ | 3 |
| ಸತ್ಯಾತ್ಮರಿಗೆ ಇತಿಹಾಸದ ಜ್ಞಾನವೇ ಇಲ್ಲ | 8 |
| ವ್ಯಾಸರಾಜರೂ ರಘೂತ್ತಮರೂ ಸಮಕಾಲೀನರಲ್ಲ | 12 |
| ಶ್ರೀಮಜ್ಜಂದ್ರಿಕಾಚಾರ್ಯರ ನಿರ್ಯಾಣ 1539 ರಲ್ಲಿ | 13 |
| ಶ್ರೀ ರಘೂತ್ತಮರು ಹುಟ್ಟಿದ್ದೇ 1547ರಲ್ಲಿ | 16 |
| ಮಧುಸೂದನಸರಸ್ವತಿ ಹುಟ್ಟಿದ್ದೇ 1540 ರಲ್ಲಿ | 22 |
| ಕಲ್ಪತರು, ಸತ್ಕಥಾ ಎಂಬ ಪರಮನೀಚಕೃತಿಗಳು | 23 |
| ವ್ಯಾಸರಾಜರ ವಿದ್ಯೆ ಸೂಳೆಯ ವಿದ್ಯೆಯಂತೆ | 23 |
| ಉತ್ತರಾದಿಮಠದವರಿಗೊಂದು ಸ್ಪಷ್ಟ ಸೂಚನೆ | 29 |

## ಸತ್ಯಾತ್ಮರು ಹೇಳಿದ ಸುಳ್ಳುಕಥೆ

ಸತ್ಯಾತ್ಮರು ತಮ್ಮ ಮಠವನ್ನು ವೈಭವೀಕರಿಸುವ ಭರದಲ್ಲಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಪವಿತ್ರಪರಂಪರೆಗಳ ಭೂಷಾಮಣಿಗಳಾದ ಅನೇಕ ಮಹನೀಯರಿಗೆ ಅಪಾರ ಅಪಚಾರವನ್ನೆಸಗಿದ್ದಾರೆ.

**ಅಂತಹ ಒಂದು ಅಪಚಾರ —** ಶ್ರೀ ವ್ಯಾಸರಾಜರ ಅಂತ್ಯಕಾಲದಲ್ಲಿ ನ್ಯಾಯಾಮೃತಕ್ಕೆ ಖಂಡನೆ ಬಂದಿತೆಂದೂ, ಖಂಡನೆ ಬರೆಯುವಷ್ಟು ವಯಸ್ಸು, ಶಕ್ತಿ ವ್ಯಾಸಯೋಗಿಗಳಿಗೆ ಇರಲಿಲ್ಲವೆಂದೂ, ಅವರ ಶಿಷ್ಯರಿಗೆ ಖಂಡನೆ ಬರೆಯುವ ಸಾಮರ್ಥ್ಯ ಇರಲಿಲ್ಲವೆಂದೂ ಅದಕ್ಕಾಗಿ ಶ್ರೀಮಚ್ಚಂದ್ರಿಕಾ-ಚಾರ್ಯರು ತಮ್ಮ ಎಲ್ಲ ಶಿಷ್ಯರನ್ನು ರಘೂತ್ತಮರ ಬಳಿಗೆ ಕಳುಹಿಸಿದರೆಂದೂ, ರಘೂತ್ತಮರು ತಮ್ಮ ಶಿಷ್ಯರನ್ನು ಮಧುಸೂದನ ಸರಸ್ವತಿಯ ಬಳಿಗೇ ಕಳುಹಿಸಿ ಅವರಿಂದಲೇ ಪಾಠ ಕಲಿತು ಖಂಡನೆ

ಬರೆಯಿಸಿದರೆಂದೂ ಒಂದು ಹಸಿಹಸಿ ಸುಳ್ಳಿನ ಕಥೆಯನ್ನು ಸತ್ಯಾತ್ಮರು ಹೆಣೆದಿದ್ದಾರೆ. ಅಥವಾ ತಮ್ಮ ಪೂರ್ವಜರು ಹೆಣೆದ ಕಥೆಯನ್ನು ಸಮಾಜದ ಮುಂದೆ ಪ್ರಸ್ತುತ ಪಡಿಸಿದ್ದಾರೆ. ಅಪಹಾಸದ ನಗುವನ್ನು ನಗುತ್ತ ಅವರು ಹೇಳಿರುವ ಆ ಕಥೆಯನ್ನು ನೀವೆಲ್ಲ ಕೇಳಿದ್ದೀರಿ.

## ಸತ್ಯಾತ್ಮರ ಕುರಿತು ಒಂದು ಸ್ಪಷ್ಟೀಕರಣ

ಈ ಕುರಿತ ಒಂದು ವಸ್ತುನಿಷ್ಠ ಚರ್ಚೆಯನ್ನು ಆರಂಭಿಸುವ ಮೊದಲು ಒಂದು ಸ್ಪಷ್ಟೀಕರಣವನ್ನು ನೀಡಿಬಿಡುತ್ತೇನೆ.

ಸತ್ಯಾತ್ಮರ ಕುರಿತು ನನಗೆ ಮೊದಲು ಅಪಾರ ಗೌರವವಷ್ಟೇ ಅಲ್ಲ. ಭಕ್ತಿ ಸಹಿತ ಇತ್ತು. ಇದನ್ನು ನನ್ನ ಲೇಖನ ಉಪನ್ಯಾಸಗಳಲ್ಲಿ ದಾಖಲಿಸಿದ್ದೆ ಸಹಿತ.

ಟೀಕಾಕೃತ್ಪಾದರು ಬರೆದದ್ದು ತಪ್ಪು ಎಂದು ಯಾರೇ ನನ್ನ ಮುಂದೆ ಕುಳಿತು ವಾದ ಮಾಡಿ ಸಾಬೀತು ಪಡಿಸಿದರೂ ಅವರಿಗೆ ಸಮಗ್ರ ಮಠದ ಆಸ್ತಿಯನ್ನು ನೀಡುತ್ತೇನೆ ಎಂದು ಹೇಳಿದ ಸತ್ಯಾತ್ಮರ ಕುರಿತು

ನಿಜವಾಗಿ ನನಗೆ ಬೆರಗಿತ್ತು. ಆದರೆ, ಬನ್ನಂಜೆ ಗೋವಿಂದಾಚಾರ್ಯರು ತನ್ನ ವ್ಯಾಖ್ಯಾನಗಳಲ್ಲಿ ಮೇಲಿಂದ ಮೇಲೆ ಟೀಕಾಕೃತ್ಪಾದರ ವ್ಯಾಖ್ಯಾನಗಳು ತಪ್ಪು ಎಂದು ಪ್ರತಿಪಾದಿಸು-ತ್ತಿದ್ದರೂ ಸತ್ಯಾತ್ಮರು ಅದರ ಕುರಿತು ಚಕಾರ ಸಹಿತ ಎತ್ತಿಲ್ಲ.

ಬ್ರಹ್ಮಸೂತ್ರಗಳಲ್ಲಿ ಓಂಕಾರವೇ ಇಲ್ಲ, ಟೀಕಾಕೃತ್ಪಾದರು ಭಾಷ್ಯವಾಕ್ಯವನ್ನು ಸೂತ್ರ ಎಂದು ತಿಳಿದಿದ್ದಾರೆ ಎಂಬಂತಹ ನೂರಾರು ಆಕ್ಷೇಪಗಳನ್ನು ಬನ್ನಂಜೆ ಮಾಡಿದ್ದರೂ ಸಹಿತ ಮಾತಿಲ್ಲದೇ ಕುಳಿತಿರುವ ಸತ್ಯಾತ್ಮರ ಕುರಿತು ನನಗೆ ಈಗ ಸರ್ವಥಾ ಗೌರವವಿಲ್ಲ. ಪ್ರಾಯಃ ಬನ್ನಂಜೆ ಏನೇನು ಆಕ್ಷೇಪ ಮಾಡಿದ್ದಾರೆ ಎನ್ನುವದೂ ಸಹಿತ ಇವರಿಗೆ ತಿಳಿದಿಲ್ಲ.

ಹೊಸದು ಬಿಡಿ. ಟೀಕಾಕೃತ್ಪಾದರಿಗೆ ದೊರೆತ ಸರ್ವಮೂಲದ ಪಾಠ  ಪರಿಶುದ್ಧಪಾಠವೇ ಅಲ್ಲ ಎನ್ನುವದು ಬನ್ನಂಜೆ ನಲವತ್ತೈದು ವರ್ಷಗಳಿಂದಲೂ ಹೇಳುತ್ತಿರುವ ಮಾತು. ಉತ್ತರಾದಿ ಮಠದಿಂದ ಒಂದಾದರೂ ಉತ್ತರ ಇದುವರೆಗೆ ಬಂದಿಲ್ಲ.

**ಸೀಕರಣೆಯ ಪ್ರಸಂಗದಲ್ಲಿ, ಉಪಾಕರ್ಮ ಏಕಾದಶಿಯ ಪ್ರಸಂಗಗಳಲ್ಲಿ ನಾನು ತತ್ವಕ್ಕಾಗಿ ಹೊಡೆದಾಡುತ್ತಿದ್ದರೆ ಸತ್ಯಾತ್ಮರ ಶಿಷ್ಯರು ನನ್ನ ವೈಯಕ್ತಿಕ ನಿಂದೆಯನ್ನು ಮಾಡಿಕೊಂಡು ಲೇಖನಗಳನ್ನು ಬರೆದರು. ಉತ್ತರವಿಲ್ಲದಾಗ ಬರುವದು ಕೋಪ ಮತ್ತು ನಿಂದೆ ಮಾತ್ರ ಎನ್ನುವದು ಇಡಿಯ ಲೋಕಕ್ಕೆ ತಿಳಿದ ವಿಷಯ.  ಸತ್ಯಾತ್ಮರ ಶಿಷ್ಯರಿಂದ ನಾನದನ್ನು ಸಮೃದ್ಧವಾಗಿ ಪಡೆದಿದ್ದೇನೆ. ಮುಂದೆ ಪಡೆಯುತ್ತಲೇ ಇರುತ್ತೇನೆ. ಅವರ ಬಳಿ ನೀಡಲು ಉತ್ತರವಿಲ್ಲ. ನನ್ನ ಬಳಿ ಇರುವ ಪ್ರಶ್ನೆಗಳು ಮುಗಿಯುವದಿಲ್ಲ.**

ಇಡಿಯ ಜಗತ್ತಿಗೆ ಉತ್ತರ ಕೊಡುವ ಮಠ ಉತ್ತರಾದಿ ಮಠ ಎಂದು ತಮ್ಮನ್ನು ತಾವು ಹೊಗಳಿಕೊಳ್ಳುವ ಇವರು, ತಮ್ಮ ಮಠದಲ್ಲಿ ಸಾವಿರಾರು ಪಂಡಿತರಿದ್ದಾರೆ ಎಂದು ಹೇಳಿಕೊಳ್ಳುವ ಇವರು, ಸತ್ಯಾತ್ಮರು ನ್ಯಾಯಸುಧಾಗ್ರಂಥಕ್ಕೆ ಹೇಳಿದ ಅರ್ಥ ತಪ್ಪು ಎಂದು ನಾನು ಸಮಾಜದ ಮಧ್ಯದಲ್ಲಿ ಲೇಖನ ಉಪನ್ಯಾಸಗಳಿಂದ ಸಾಬೀತು ಪಡಿಸಿ ನಾಲ್ಕು ವರ್ಷಗಳಾಗುತ್ತ ಬಂದರೂ ಸತ್ಯಾತ್ಮರಿಗಾಗಲೀ, ಅವರ ಸಾವಿರಾರು

ಶಿಷ್ಯರಿಗಾಗಲೀ ಇವತ್ತಿನವರೆಗೆ ಉತ್ತರ ನೀಡಲಿಕ್ಕಾಗಿಲ್ಲ.

ಈ ಲೇಖನವನ್ನು ಬರೆದ ಬಳಿಕವೂ ನಿಂದೆಗಳ ಸುರಿಮಳೆಯಾಗುತ್ತದೆಯೇ ಹೊರತು ಒಬ್ಬರೂ ಪ್ರಾಮಾಣಿಕ ಪ್ರಶ್ನೋತ್ತರಕ್ಕೆ ತಯಾರಾಗುವದಿಲ್ಲ.

**ಆದರೆ ಶ್ರೀ ವಿಜಯಧ್ವಜತೀರ್ಥಶ್ರೀಪಾದಂಗಳವರಿಗೆ ಶ್ರೀ ವ್ಯಾಸರಾಜಗುರುಸಾರ್ವಭೌಮರಿಗೆ, ಶ್ರೀ ಶ್ರೀಪಾದರಾಜಗುರುಸಾರ್ವಭೌಮರಿಗೆ, ಶ್ರೀ ಮಂತ್ರಾಲಯಪ್ರಭುಗಳಿಗೆ ಅವರಿಂದ ಅವಮಾನವಾದಾಗ ಸುಮ್ಮನೇ ಕೂಡಬೇಕೆ?**

ವಿಜಯಧ್ವಜರು ಅನ್ನಕ್ಕಾಗಿ ಹಪಹಪಿಸಿ ತಾವೇ ಒಲೆ ಹತ್ತಿಸಿ ಅಡಿಗೆ ಮಾಡಿಕೊಳ್ಳುತ್ತಿದ್ದರು, ವ್ಯಾಸರಾಜರ ವಿದ್ಯೆ ಸೂಳೆಯ ವಿದ್ಯೆ, ಶ್ರೀ ವ್ಯಾಸರಾಜರಿಗೆ ಮತ್ತು ಸುರೇಂದ್ರರಿಗೆ ಕೌಪೀನಶುದ್ಧಿ ಇರಲಿಲ್ಲ, ಶ್ರೀಪಾದರಾಜರನ್ನು ಅನುಗ್ರಹಿಸಿದ್ದು ತಾವೇ, ರಾಘವೇಂದ್ರಸ್ವಾಮಿಗಳು ತಮ್ಮ ಮಠದವರ ಬಳಿ ಬಂದು ಕ್ಷಮೆ ಕೇಳಿದರು, ಸುಮತೀಂದ್ರರನ್ನು ಪೀಠದಲ್ಲಿ ಕೂಡಿಸಿದ್ದು ನಾವೇ

ಎಂಬಿತ್ಯಾದಿ ಸುಳ್ಳುಗಳನ್ನು ಹೇಳುತ್ತಲೇ, ಮಹಾಜ್ಞಾನಿಗಳನ್ನು ನಿಂದಿಸುತ್ತಲೇ ತಾವು ದೊಡ್ಡವರು ಎಂದು ಹೇಳಿಕೊಳ್ಳುವ ಇವರಿಗೆ ಉತ್ತರ ನೀಡಲೇ ಬೇಕಾಗಿದೆ.  ಅವರ ಮಾತುಗಳಿಂದಲೇ ಅವರ ಕಥೆಗಳು ಸುಳ್ಳು ಎನ್ನುವದನ್ನು ತೋರಿಸಿಕೊಡುತ್ತೇನೆ.

**ಯಾರ ವಿದ್ಯೆ ಸಮಗ್ರ ಮಾಧ್ವಸಮಾಜದ ಭದ್ರಕೋಟೆಯೋ ಅಂತಹ ಶ್ರೀಮದ್ ವ್ಯಾಸರಾಜಗುರುಸಾರ್ವಭೌಮರ ವಿದ್ಯೆಯನ್ನು ಸೂಳೆಯರ ವಿದ್ಯೆ ಎಂದು ನಿಂದಿಸಿದವರಿಗೆ, ಯಾರ ಸಂನ್ಯಾಸದ ಶುದ್ದಿಯನ್ನು ಶೇಷದೇವರು ಕೊಂಡಾಡಬೇಕು ಎಂದು ಗುರುಗಳಾದ ಶ್ರೀಪಾದರಾಜರೇ ಹಾಡಿ ಹೊಗಳಿದರೋ ಅಂತಹ ಶ್ರೀ ವ್ಯಾಸರಾಜಗುರುಸಾರ್ವಭೌಮರಿಗೇ ಕೌಪೀನಶುದ್ಧಿಯಿಲ್ಲ ಎಂದು ನಿಂದಿಸಿದ ಉತ್ತರಾದಿಮಠದವರಿಗೆ ನನ್ನನ್ನು ನಿಂದಿಸುವದು ದೊಡ್ಡ ಮಾತೇ? ಸಮೃದ್ಧವಾಗಿ ಈಗಾಗಲೇ ನಿಂದಿಸಿದ್ದಾರೆ. ಮುಂದೆಯೂ ನಿಂದಿಸುತ್ತಾರೆ. ಅವರ ಸಂಪ್ರದಾಯವಲ್ಲವೇ ಅದು.**

## ಸತ್ಯಾತ್ಮರಿಗೆ ಇತಿಹಾಸದ ಜ್ಞಾನವೇ ಇಲ್ಲ

ತಮ್ಮ ಗ್ರಂಥಕ್ಕೆ ಬಂದ ಖಂಡನೆಗೆ ಉತ್ತರ ನೀಡಲು ವ್ಯಾಸರಾಜರು ತಮ್ಮ ಶಿಷ್ಯರನ್ನು ರಘೂತ್ತಮರ ಬಳಿಗೆ ಕಳುಹಿಸಿದರು ಎಂಬ ಸುಳ್ಳು ಕಥೆಯನ್ನು ಹೇಳುತ್ತಿರುವ ಸತ್ಯಾತ್ಮರಿಗೆ ಇತಿಹಾಸವೇ ಗೊತ್ತಿಲ್ಲ.

ಟೀಕಾಕೃತ್ಪಾದರು ನಳಂದಾ ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿದ್ದರೆಂದೂ, ಆ ನಂತರ ಸ್ವಲ್ಪ ದಿವಸದಲ್ಲಿ ಔರಂಗಜೇಬ ಬಂದು ಅದನ್ನು ಹಾಳು ಮಾಡಿದನೆಂದೂ ಸತ್ಯಾತ್ಮರು ಹೇಳುತ್ತಾರೆ. ಎಲ್ಲಿಯ ಟೀಕಾಕೃತ್ಪಾದರ ಕಾಲ, ಎಲ್ಲಿಯ ಔರಂಗಜೇಬ?

ಔರಂಗಜೇಬ ಯಾವ ವಂಶದಲ್ಲಿ ಹುಟ್ಟಿಬಂದನೋ ಆ ವಂಶದ ಮೂಲಪುರುಷನಾದ ಬಾಬರ ಹುಟ್ಟಿದ್ದೇ 1483ರಲ್ಲಿ. ಟೀಕಾಕೃತ್ಪಾದರ ನಿರ್ಯಾಣವಾದ ನೂರಾರು ವರ್ಷಗಳ ನಂತರ.

ಇನ್ನೂ ವಿಚಿತ್ರ ಎಂದರೆ ನಳಂದಾ ವಿಶ್ವವಿದ್ಯಾಲಯವನ್ನು ವಿನಾಶ ಮಾಡಿದ್ದು

ಔರಂಗಜೇಬ ಅಲ್ಲ. ಮಹಮದ್ ಖಿಲ್ಜಿ. ಟೀಕಾಕೃತ್ಪಾದರಲ್ಲ, ಶ್ರೀಮದಾಚಾರ್ಯರ ಅವತಾರಕ್ಕಿಂತಲೂ ಮುಂಚೆಯೇ, ಅಂದರೆ 1193ರಲ್ಲಿ ಮಹಮ್ಮದ್ ಬಿನ್ ಬಕ್ತಿರ್ಯ ಖಿಲ್ಜಿ ನಳಂದಾ ವಿಶ್ವವಿದ್ಯಾಲಯವನ್ನು ಧ್ವಂಸ ಮಾಡಲು ಆರಂಭಿಸಿದ್ದ. 1200 ರಲ್ಲಿ ಪೂರ್ಣ ವಿನಾಶ ಮಾಡಿದ. ಈ ಇತಿಹಾಸದ ತಿಳುವಳಿಕೆಯೇ ಸತ್ಯಾತ್ಮರಿಗಿಲ್ಲ.




ಮೇಲಿನ ಚಿತ್ರ ಇವತ್ತಿಗೂ ನಳಂದಾದ ಅವಶೇಷಗಳ ಮುಂದೆ ಸರಕಾರ ಸ್ಥಾಪಿಸಿರುವ ಶಿಲಾಲೇಖದ್ದು. ಇದರ ಎರಡನೆಯ

ಪ್ಯಾರಾಗ್ರಾಫಿನ ಕಡೆಯ ಸಾಲಿನಲ್ಲಿ ಸ್ಪಷ್ಟವಾಗಿ 1200ರ ಆಕ್ರಮಣದಲ್ಲಿ ನಳಂದಾ ಪೂರ್ಣ ಪರ್ಯವಸಾನವಾಯಿತು ಎಂದಿದೆ. ಓದಿ. 1193 ರಿಂದ 1200 ರ ಏಳು ವರ್ಷದ ಆಕ್ರಮಣಗಳಲ್ಲಿ  ಪೂರ್ಣ ವಿನಾಶವಾದ ನಳಂದಾ ವಿಶ್ವವಿದ್ಯಾಲಯವನ್ನು 1658ರಿಂದ 1707 ರವರೆಗೆ ರಾಜನಾಗಿದ್ದ ಔರಂಗಜೇಬ ಹೇಗೆ ವಿನಾಶ ಮಾಡಲು ಸಾಧ್ಯ?

ಇದೊಂದು ಸಣ್ಣ ಉದಾಹರಣೆಯಷ್ಟೆ. ಸತ್ಯಾತ್ಮರು ಹೇಳಿರುವ ಗುರುಪರಂಪರೆಯ ಇತಿಹಾಸ ಕೇಳಿದರೆ ಅವರು ಕೇವಲ ಅವರ ಮಠದ ದುರಾಗ್ರಹಯುಕ್ತ ಪರಮನೀಚಕಥೆಗಳನ್ನು ಕೇಳಿ ಹೇಳುತ್ತಿದ್ದಾರಷ್ಟೇ ಹೊರತು ಅವರಿಗೆ ಇತಿಹಾಸದ ಜ್ಞಾನವಿಲ್ಲ ಎನ್ನುವದು ಸುಸ್ಪಷ್ಟವಾಗುತ್ತದೆ.

ಶ್ರೀ ರಘೂತ್ತಮರ ಮತ್ತು ಶ್ರೀಮಚ್ಚಂದ್ರಿಕಾಚಾರ್ಯ ಗುರುಸಾರ್ವಭೌಮರ ವಿಷಯದಲ್ಲಿ ಸತ್ಯಾತ್ಮರಿಗೆ ಇತಿಹಾಸದ ತಿಳುವಳಿಕೆ ಇಲ್ಲ ಎನ್ನುವದನ್ನು ಸಹಿತ ಆಧಾರಗಳ ಸಮೇತ ಸಾಬೀತು ಪಡಿಸುತ್ತೇನೆ. ಆ ನಂತರ ನೀವೇ ನಿರ್ಣಯಿಸಿ.

ಇತಿಹಾಸದಲ್ಲಿ ಕೆಲವರ ಕಾಲನಿರ್ಣಯವನ್ನು ಮಾಡುವದು ತುಂಬ ಕಷ್ಟ. ಉತ್ತರಾದಿ ಮಠದಲ್ಲಂತೂ ಅವರ ಮೂಲಪುರುಷರಾದ ವಿದ್ಯಾನಿಧಿಗಳ ಕಾಲವೇ ಸರಿಯಾಗಿಲ್ಲ.

ಯಾರಿಂದ ಉತ್ತರಾದಿಮಠ ಆರಂಭವಾಯಿತೋ ಅಂತಹ ವಿದ್ಯಾನಿಧಿಗಳ ಚರಮಶ್ಲೋಕವೇ ಸುಳ್ಳು ಎಂದು ಸಾಬೀತಾಗಿದೆ. ಉತ್ತರಾದಿಮಠದವರೇ ಇದನ್ನು ಒಪ್ಪಿದ್ದಾರೆ. ಮೂಲದಲ್ಲಿಯೇ ಇಷ್ಟು ಸುಳ್ಳನ್ನು ಹೊತ್ತ ಇವರ ಮಠದ ಕಥೆಗಳು ಮುಂದೆ ಸುಳ್ಳಿನ ಮಹಾವೃಕ್ಷವಾಗಿ ಇಂದು ನಮ್ಮಮುಂದೆ ನಿಂತಿವೆ.

**ಆದರೆ ದೈವೇಚ್ಛೆ ಎಷ್ಟು ಪ್ರಬಲ ಎಂದರೆ, ಸುಳ್ಳನ್ನು ಖಂಡನೆ ಮಾಡಲು ದೈವ ಎಷ್ಟು ಸಹಾಯ ಮಾಡುತ್ತದೆ ಎಂದರೆ  ಶ್ರೀ ವ್ಯಾಸರಾಜ ಗುರುಸಾರ್ವಭೌಮರ ಮತ್ತು ಶ್ರೀರಘೂತ್ತಮ ತೀರ್ಥಗುರುಗಳ ಕಾಲಮಾನದಲ್ಲಿ ಯಾವ ಗೊಂದಲವೂ ಇಲ್ಲ.**

## ವ್ಯಾಸರಾಜರೂ ರಘೂತ್ತಮರೂ ಸಮಕಾಲೀನರಲ್ಲ

ನ್ಯಾಯಾಮೃತದ ಖಂಡನೆಗೆ ಉತ್ತರ ನೀಡಲು ವ್ಯಾಸರಾಜರು ತಮ್ಮ ಶಿಷ್ಯರನ್ನು ರಘೂತ್ತಮರ ಬಳಿ ಕಳುಹಿಸಬೇಕಾದರೆ, ವ್ಯಾಸರಾಜರು ರಘೂತ್ತಮರು ಸಮಕಾಲೀನರಾಗಿರಬೇಕು ತಾನೆ.

ಶ್ರೀ ವ್ಯಾಸರಾಜರ ನಿರ್ಯಾಣ 1539ರಲ್ಲಿ.

ಶ್ರೀ ರಘೂತ್ತಮರು ಹುಟ್ಟಿದ್ದೇ 1547ರಲ್ಲಿ.

ಇನ್ನೂ ವಿಚಿತ್ರ ಎಂದರೆ ನ್ಯಾಯಾಮೃತಕ್ಕೆ ಖಂಡನೆ ಬರೆದ ಮಧುಸೂದನ ಸರಸ್ವತಿ ಹುಟ್ಟಿದ್ದೇ 1540ರಲ್ಲಿ. ಅಂದರೆ ವ್ಯಾಸರಾಜರ ನಿರ್ಯಾಣವಾದ ಒಂದು ವರ್ಷದ ನಂತರ.

ವ್ಯಾಸರಾಜರ ಕಾಲಕ್ಕೆ ನ್ಯಾಯಾಮೃತಕ್ಕೆ ಖಂಡನೆಯೇ ಬಂದಿರಲಿಲ್ಲ. ಖಂಡನೆ ಬರೆದವನೂ ಹುಟ್ಟಿರಲಿಲ್ಲ. ರಘೂತ್ತಮರೂ ಹುಟ್ಟಿರಲಿಲ್ಲ. ಅಂದಮೇಲೆ ಇದು ಸತ್ಯಾತ್ಮರ ಸುಳ್ಳುಕಥೆ-ಯಲ್ಲದೇ ಮತ್ತೇನು. ಪ್ರಮಾಣಸಮೇತವಾಗಿ ಪ್ರತಿಪಾದಿಸುತ್ತೇನೆ, ನೋಡಿ.

## ಶ್ರೀಮಚ್ಚಂದ್ರಿಕಾಚಾರ್ಯರ ನಿರ್ಯಾಣ 1539 ರಲ್ಲಿ

ಶ್ರೀಮದ್ ವ್ಯಾಸರಾಜಗುರುಸಾರ್ವಭೌಮರ ಅವತಾರದ ಕಾಲದಲ್ಲಾಗಲೀ, ನಿರ್ಯಾಣದ ಕಾಲದಲ್ಲಾಗಲೀ ಸಂದೇಹವೇ ಇಲ್ಲ.

ಚಂದ್ರಿಕಾಚಾರ್ಯರ ಅವತಾರ ಪ್ರಭವನಾಮ ಸಂವತ್ಸರದಲ್ಲಿ. ಅಂದರೆ 1447 ನೇ ಇಸವಿಯಲ್ಲಿ.

ಇದಕ್ಕೆ ಪ್ರಮಾಣ — ಶ್ರೀವಿದ್ಯಾರತ್ನಾಕರತೀರ್ಥರ ವ್ಯಾಸರಾಜಚರಿತ್ರೆ —

**“ಸಂವತ್ಸರೇಷ್ವಾದಿಮೇ**
**ವೈಶಾಖಾದಿಮಪಕ್ಷಕೇ**
**ದಿನಮಣೇರ್ವಾರೇ ದಿನೇ ಸಪ್ತಮೇ**
**ಪ್ರಹ್ಲಾದೋವತತಾರ ಭೂಮಿವಲಯೇ**
**ನಾಗಾಧಿಪಸ್ಯಾಂಶಭೃತ್”**

ಮೊದಲ ಸಂವತ್ಸರ ಎಂದರೆ ಪ್ರಭವ ಸಂವತ್ಸರದಲ್ಲಿ ಶ್ರೀಮಚ್ಚಂದ್ರಿಕಾಚಾರ್ಯರ ಅವತಾರ.

ನಿರ್ಯಾಣ — ವಿಳಂಬಿ ನಾಮಸಂವತ್ಸರದ ಫಾಲ್ಗುನ ಕೃಷ್ಣ ಚತುರ್ಥೀ

ಇದಕ್ಕೆ ಪ್ರಮಾಣ —

ಶ್ರೀಮಚ್ಚಂದ್ರಿಕಾಚಾರ್ಯರ ಸಮಕಾಲೀನರಾದ ಅವರಿಂದಲೇ ಹರಿದಾಸದೀಕ್ಷೆಯನ್ನು ಪಡೆದ ಶ್ರೀ ಪುರಂದರರದಾಸಾರ್ಯರ ಪದ್ಯ —

**ವಿಳಂಬಿವತ್ಸರ ವಿಜಯನಗರದಲ್ಲಿ**
**ಫಾಲುಗುಣ ಚತುರ್ಥಿ ಸ್ಥಿರವಾರದಿ**
**ಬೆಳಗೊಪ್ಪ ಜಾವದಿ ಕುಳಿತು ಪದ್ಮಾಸನದಿ**
**ನಳಿನಾಕ್ಷ ನಾರಾಯಣನೆಂದು ಕೈಮುಗಿದು**

**ಚಿತ್ತೈಸಿದ ವ್ಯಾಸರಾಯ ಚಿತ್ತಜನಯ್ಯನ ಸಭೆಗೆ**

ಶ್ರೀ ವಿದ್ಯಾರತ್ನಾಕರತೀರ್ಥರ ವ್ಯಾಸರಾಜಗುರುಸಾರ್ವಭೌಮಚರಿತ್ರೆಯ[1] ಎಂಟನೆಯ ಶ್ಲೋಕ —

---

[1] ಈ ಕೃತಿಯ ವಿವರಣೆಯನ್ನು ನೀಡುವ ಉಪನ್ಯಾಸಗಳನ್ನು ಮಾಡಿದ್ದೇನೆ. VNU001, VNU002, VNU003.

## ಅಧ್ಯಾಸ್ತಾವನಿಮಾವಿಳಂಬಿಶರದಮ್...

ವಿಳಂಬಿ ವತ್ಸರದವರೆಗೆ ಶ್ರೀಮಚ್ಚಂದ್ರಿಕಾಚಾರ್ಯರು ಭೂಮಿಯಲ್ಲಿದ್ದರು. ವಿಳಂಬಿಸಂವತ್ಸರ 1538-39ರಲ್ಲಿ ಬಂದಿತ್ತು. ವಿಳಂಬಿಸಂವತ್ಸರದ ಫಾಲ್ಗುನ ಕೃಷ್ಣ ಚತುರ್ಥಿ 1539ರಲ್ಲಿ ಬಂದಿತ್ತು.

ಅದರ ಹಿಂದಿನ ವಿಳಂಬಿ 1478ರಲ್ಲಿ ಬಂದಿತ್ತು. 1509 ರಿಂದ 1529ರವರೆಗೆ ರಾಜ್ಯವಾಳಿದ ಶ್ರೀಕೃಷ್ಣದೇವರಾಯನಿಗೆ ಗುರುಗಳಾಗಿದ್ದ ಶ್ರೀ ವ್ಯಾಸರಾಜರ ನಿರ್ಯಾಣ 1478ರಲ್ಲಿ ಆಗಲು ಸಾಧ್ಯವೇ ಇಲ್ಲ.

ಅದರ ಮುಂದಿನ ವಿಳಂಬಿ 1598ರಲ್ಲಿ ಬಂದಿತ್ತು. ಆಗ ರಘೂತ್ತಮರೂ ಇರಲಿಲ್ಲ. ಅವರ ನಿರ್ಯಾಣ 1596 ರ ದುರ್ಮುಖದಲ್ಲಿ.

ಮತ್ತು ವಿಜಯನಗರ ಪತನವಾದದ್ದು 1569ರಲ್ಲಿ. ಆಗ ಶ್ರೀ ಚಂದ್ರಿಕಾಚಾರ್ಯರ ಪ್ರಶಿಷ್ಯರಾದ ಶ್ರೀ ರಾಮತೀರ್ಥಗುರುಸಾರ್ವಭೌಮರು ಪೀಠದಲ್ಲಿದ್ದರು ಎನ್ನುವದು ದಾಖಲೆಗಳಿಂದ ನಿರ್ಣೀತ.

## ಶ್ರೀ ರಘೂತ್ತಮರು ಹುಟ್ಟಿದ್ದೇ 1547ರಲ್ಲಿ

ಉತ್ತರಾದಿಮಠದ ಸತ್ಯಾತ್ಮರಿಂದ ಆರಂಭಿಸಿ ಅವರ ಸಕಲ ಶಿಷ್ಯರೂ ಪರಮಪ್ರಮಾಣ ಎಂದು ಒಪ್ಪುವ ಒಂದು ಕೃತಿ ಪೂರ್ಣಬೋಧಕಥಾ-ವಂಶಕಲ್ಪತರು. ದೈವಜ್ಞ ಭೀಮ ಎಂಬುವವನು ಬರೆದ ಪರಮನೀಚಕೃತಿ[2].

ಆ ಕೃತಿಯ ಹನ್ನೊಂದನೇ ಶಾಖಾಸರ್ಗದ ಇಪ್ಪತ್ನೂರನೇ ಶ್ಲೋಕದಲ್ಲಿ ರಘೂತ್ತಮರಿಗೆ ಆನಂದಸಂವತ್ಸರದಲ್ಲಿ ಸಂನ್ಯಾಸ ಎಂದಿದೆ —


ततस्तु रघुवर्यश्च नन्दसंवत्सरे मुदा ॥
स्वपूर्वाश्रमसंबन्धिभागिनेयाय साधवे ॥ २३ ॥
ब्रह्मचर्यव्रतस्थाय दत्वा सन्न्यासमादरात् ॥
कृत्वाऽभिषेकं सदसि ददुर्नाम मनोहरम् ॥ २४ ॥

---

[2] ವ್ಯಾಸರಾಜರಿಗೆ ಕೌಪೀನಶುದ್ಧಿಯಿಲ್ಲ, ಅವರ ವಿದ್ಯೆ ಸೂಳೆಯ ವಿದ್ಯೆಗೆ ಸಮಾನ ಇತ್ಯಾದಿ ನೀಚ ಮಾತುಗಳು ಇರುವದು ಈ ಹೊಲಸು ಪುಸ್ತಕದಲ್ಲಿಯೇ. ಮುಂದಿನ ದಿವಸಗಳಲ್ಲಿ ಈ ಪರಮನೀಚಕೃತಿಯ ಎಲ್ಲ ನೀಚವಿಷಯಗಳ ಖಂಡನೆಯನ್ನು ಮಾಡಿ ನೀಡುತ್ತೇನೆ.

**ತತಸ್ತು ರಘುವರ್ಯಾಶ್ಚಾ-**
**ನಂದಸಂವತ್ಸರೇ ಮುದಾ**
**ಸ್ವಪೂರ್ವಾಶ್ರಮಸಂಬಂಧಿ-**
**ಭಾಗಿನೇಯಾಯ ಸಾಧವೇ**

**ಬ್ರಹ್ಮಚರ್ಯವ್ರತಸ್ಥಾಯ**
**ದತ್ವಾ ಸಂನ್ಯಾಸಮಾದರಾತ್**
**ಕೃತ್ವಾಭಿಷೇಕಂ ಸದಸಿ**
**ದದುರ್ನಾಮ ಮನೋಹರಮ್**

**ರಘೂತ್ತಮಯತೀಂದ್ರೋಯಮಿತಿ**

ಇದರ ಅರ್ಥ ಹೀಗಿದೆ —

ರಘುವರ್ಯರು ಆನಂದಸಂವತ್ಸರದಲ್ಲಿ ತಮ್ಮ ಪೂರ್ವಾಶ್ರಮ ಸಂಬಂಧಿಯಾದ, ತನ್ನ ಸೋದರಿಯ ಮಗನಾದ, ಬ್ರಹ್ಮಚಾರಿಯಾದ ಹುಡುಗನಿಗೆ ಸಂನ್ಯಾಸ ಕೊಟ್ಟು ರಘೂತ್ತಮ ಎಂಬ ಹೆಸರನ್ನು ನೀಡಿದರು.

1554ರ ಅನಂದ ಸಂವತ್ಸರದಲ್ಲಿ[3] ರಘೂತ್ತಮರಿಗೆ ಸಂನ್ಯಾಸ ಎನ್ನುವದು ನಿರ್ಣೀತ.

## ಸತ್ಕಥಾದಲ್ಲಿ ಇನ್ನೂ ಸ್ಪಷ್ಟವಾಗಿ ಕಾಲನಿರ್ಣಯವಾಗುತ್ತದೆ —



೧೪ ಶ್ರೀರಘೂತ್ತಮತೀರ್ಥರು

ಪಟ್ಟ:- ೧೮-೩-೧೪೭೯ನೇ ಪಿಂಗಳದಿಂದ ೨೬-೧೦-೧೫೧೭ನೇ ಮನ್ಮಥದವರೆಗೆ

ಇವರ ಪೂರ್ವಾಶ್ರಮದ ಹೆಸರು **ರಾಮಚಂದ್ರಾಚಾರ್ಯರು.** ಹಿಂದಿನಂತೆ ಇವರು ಬಾಲ್ಯದಲ್ಲಿಯೇ ಗುರುಗಳಿಂದ ಆಶ್ರಮವನ್ನು ಸ್ವೀಕರಿಸಿ ಅವರಲ್ಲಿಯೇ ಓದುತ್ತಿದ್ದು ಗುರುಗಳ ವೃಂದಾವನದ

ಇದರಲ್ಲಿ ರಘೂತ್ತಮರ ಪಟ್ಟ ೧೪೭೯ನೇ ಶಾಲೀವಾಹನದ ಪಿಂಗಳದಿಂದ ೧೫೧೭ನೇ ಮನ್ಮಥದವರೆಗೆ ಎಂದಿದೆ. ಪಿಂಗಳ ಬಂದದ್ದು

[3] ಆನಂದಸಂವತ್ಸರ 1494ರಲ್ಲಿ ಬಂದಿತ್ತು. ಆಗಿನ್ನೂ ರಘುವರ್ಯರಿಗೇ ಸಂನ್ಯಾಸ ಆಗಿರಲಿಲ್ಲ. ರಘುವರ್ಯರು ಪೀಠಕ್ಕೆ ಬಂದದ್ದೇ 1502ರ ನಂತರ ಎನ್ನುವದು ಉತ್ತರಾದಿಮಠದವರೇ ಒಪ್ಪಿದ ವಿಷಯ.

ಆ ನಂತರದ ಆನಂದ ಸಂವತ್ಸರ ಬಂದದ್ದು 1554ರಲ್ಲಿ.

ಆ ನಂತರ 1614ರಲ್ಲಿ. ಆಗ ರಘೂತ್ತಮರೇ ಬದುಕಿರಲಿಲ್ಲ. ಹೀಗಾಗಿ 1554ರ ಆನಂದದಲ್ಲಿಯೇ ಸಂನ್ಯಾಸ ಎನ್ನುವದು ನಿರ್ಣೀತ.

1557ರಲ್ಲಿ ಮನ್ಮಥ 1596ರಲ್ಲಿ. ಹೀಗಾಗಿ 1557 ರಿಂದ 1596ರ ವರೆಗೆ ಅವರು ತಮ್ಮ ಮಠವನ್ನು ಆಳಿದರು ಎನ್ನುವದು ಸಿದ್ಧವಾಗುತ್ತದೆ.

ಸಾಮಾನ್ಯವಾಗಿ ಉತ್ತರಾದಿ ಮಠದವರ ಲೆಕ್ಕವನ್ನು ಉತ್ತರಾದಿ ಮಠದವರೇ ಒಪ್ಪುವದಿಲ್ಲ. ಉದಾಹರಣೆಗೆ ರಘುವರ್ಯರು ನೂರಕ್ಕಿಂತ ಹೆಚ್ಚು ವರ್ಷ  ಆಳಿದರು ಎಂದು ಕಲ್ಪಿತರು ಹೇಳುತ್ತದೆ. ಆದರೆ ಅದು ಸುಳ್ಳು ಎಂದು ಉತ್ತರಾದಿ ಮಠದವರೇ ನಿರ್ಣಯಿಸಿ ಬೇರೆ ಲೆಕ್ಕ ಕೊಟ್ಟಿದ್ದಾರೆ. ವಿದ್ಯಾನಿಧಿಗಳು 68 ವರ್ಷ ಉತ್ತರಾದಿಮಠವನ್ನು ಆಳಿಲ್ಲ, ಅವರ ಚರಮಶ್ಲೋಕ ಸತ್ಯವಲ್ಲ ಎನ್ನುವದು ನಿಸ್ಸಂದಿಗ್ಧವಾಗಿ ಸಾಬೀತಾಗಿದೆ.

ಆದರೆ ರಘೂತ್ತಮರ ಕಾಲದಲ್ಲಿ ಯಾವ ಗೊಂದಲವೂ ಇಲ್ಲ. ಅವರ ಪರಮಪ್ರಮಾಣ ಗ್ರಂಥಗಳಾದ ಎರಡೂ ಕೃತಿಗಳು 1557ರಿಂದ 1596 ರವರೆಗೆ ರಘೂತ್ತಮರ ಕಾಲ ಎಂದು ಹೇಳುತ್ತವೆ. ರಘೂತ್ತಮರ ಕುರಿತು ಪುಸ್ತಕ ಬರೆದ ಅದೇ ಮಠದವರೆಲ್ಲ ಇದೇ ಕಾಲವನ್ನು ಹಾಕಿದ್ದಾರೆ.

ರಘೂತ್ತಮರದು ಬಾಲಸಂನ್ಯಾಸ ಎನ್ನುವದು ಉತ್ತರಾದಿಮಠದವರೇ ಹೇಳುವ ಕಥೆ. ಕಲ್ಪತರುವೂ ಅದನ್ನೇ ಹೇಳುತ್ತದೆ — **ಬ್ರಹ್ಮಚರ್ಯಸ್ಥಿತಂ** ಎಂದು. ಸತ್ಕಥೆಯೂ ಹೇಳುತ್ತದೆ —ರಘೂತ್ತಮರು ಬಾಲ್ಯದಲ್ಲಿಯೇ ಆಶ್ರಮ ಸ್ವೀಕರಿಸಿದರು ಎಂದು.

ಸತ್ಯಾತ್ಮರೂ ತಮ್ಮ ಮಠದ ಕಥೆಗಳನ್ನು ಹೇಳಬೇಕಾದರೆ ರಘೂತ್ತಮರಿಗೆ ಎಂಟನೇ ವಯಸ್ಸಿಗೆ ಸಂನ್ಯಾಸ ಎಂದು ಹೇಳಿದ್ದಾರೆ.

1554 ರಲ್ಲಿ ಸಂನ್ಯಾಸ ಎಂದರೆ, ಆಗ ರಘೂತ್ತಮರಿಗೆ ಎಂಟು ವರ್ಷ ಎಂದರೆ 1547ರಲ್ಲಿ ರಘೂತ್ತಮರು ಹುಟ್ಟಿದ್ದು ಎನ್ನುವದು ನಿಸ್ಸಂದಿಗ್ಧವಾಗಿ ನಿರ್ಣೀತವಾಗುತ್ತದೆ.

ಈಗ ನೀವೇ ಹೇಳಿ 1539ರಲ್ಲಿ ನಿರ್ಯಾಣ ಹೊಂದಿದ ಶ್ರೀಮಚ್ಚಂದ್ರಿಕಾಚಾರ್ಯರು 1547ರಲ್ಲಿ ಹುಟ್ಟಿದ ರಘೂತ್ತಮರ ಬಳಿಗೆ ತಮ್ಮ ಶಿಷ್ಯರನ್ನು ಕಳುಹಿಸಿದ್ದು ಸುಳ್ಳುಕಥೆಯೋ ಸತ್ಯಕಥೆಯೋ ಎಂದು.

ತಮ್ಮವರನ್ನು ದೊಡ್ಡವರನ್ನಾಗಿ ಮಾಡಲು ಸತ್ಯಾತ್ಮರಿಗೆ ಇಂತಹ ಸುಳ್ಳುಗಳನ್ನು ಹೇಳುವ ಆವಶ್ಯಕತೆಯಿದೆಯೇ?

## ಮಧುಸೂದನಸರಸ್ವತಿ ಹುಟ್ಟಿದ್ದೇ 1540 ರಲ್ಲಿ

ನ್ಯಾಯಾಮೃತಕ್ಕೆ ಮಧುಸೂದನ ಸರಸ್ವತಿ ಅದ್ವೈತಸಿದ್ಧಿ ಎಂಬ ಖಂಡನೆಯನ್ನು ಬರೆದರೆಂದೂ, ಅದನ್ನು ಖಂಡಿಸಲು ಸಾಧ್ಯವಾಗದೇ ಶ್ರೀಮಚ್ಚಂದ್ರಿಕಾಚಾರ್ಯರು ತಮ್ಮ ಶಿಷ್ಯರನ್ನು ರಘೂತ್ತಮರ ಬಳಿಗೆ ಕಳಿಸಿದರು ಎನ್ನುವದು ಸತ್ಯಾತ್ಮರು ಹೇಳಿದ ಕಟ್ಟುಕತೆ.

ವಿಚಿತ್ರ ಎಂದರೆ ಚಂದ್ರಿಕಾಚಾರ್ಯರ ಕಾಲಕ್ಕಲ್ಲ, ಅವರ ಶಿಷ್ಯರಾದ ಶ್ರೀ ಶ್ರೀನಿವಾಸತೀರ್ಥರ ಕಾಲದಲ್ಲಿ[4] ಸಹಿತ ಅದ್ವೈತಸಿದ್ಧಿ ರಚನೆಯಾಗಿರಲಿಲ್ಲ. ಅದ್ವೈತಸಿದ್ಧಿಯನ್ನು ರಚನೆ ಮಾಡಿದ ಮಧುಸೂದನ ಸರಸ್ವತಿ ಹುಟ್ಟಿದ್ದೇ1540 ರಲ್ಲಿ. ಇಂಟರ್ನೆಟ್ಟಿನಲ್ಲಿ ಇದರ ಕುರಿತ ಸಮೃದ್ಧ ಮಾಹಿತಿ ದೊರೆಯುತ್ತದೆ. ನೋಡಿ.

---

[4] ಶ್ರೀ ಶ್ರೀನಿವಾಸತೀರ್ಥಗುರುಸಾರ್ವಭೌಮರ ನಿರ್ಯಾಣ 1564ರಲ್ಲಿ. ಆಗಿನ್ನೂ ಮಧುಸೂದನ ಸರಸ್ವತಿಗೆ ಇಪ್ಪತ್ನಾಲ್ಕು ವರ್ಷ ವಯಸ್ಸು.

## ಕಲ್ಪತರು, ಸತ್ಕಥಾ ಎಂಬ ಪರಮನೀಚಕೃತಿಗಳು

ಉತ್ತರಾದಿ ಮಠದ ಇತಿಹಾಸವನ್ನು ತಿಳಿಸುವ, ಅವರಿಗೆ ಪರಮಪ್ರಮಾಣವಾದ[5] ಎರಡು ಕೃತಿಗಳು ಪೂರ್ಣಬೋಧಕಥಾವಂಶಕಲ್ಪತರು ಮತ್ತು ಸತ್ಕಥಾ ಎಂಬ ಪರಮನೀಚ ಪುಸ್ತಕಗಳು.

## ವ್ಯಾಸರಾಜರ ವಿದ್ಯೆ ಸೂಳೆಯ ವಿದ್ಯೆಯಂತೆ

ಪರಮನೀಚ ಯಾಕೆಂದರೆ ಆ ಪೂರ್ಣಬೋಧಕಥಾವಂಶಕಲ್ಪತರುವಿನಲ್ಲ **ವ್ಯಾಸರಾಜರ ವಿದ್ಯೆಯನ್ನು ಸೂಳೆಯ ವಿದ್ಯೆಗೆ** ಹೋಲಿಸಿ ನಿಂದಿಸಲಾಗಿದೆ.

ಚಿಕ್ಕಣ್ಣ ಎಂಬ ಒಬ್ಬ ಸ್ಮಾರ್ತನಿಗೆ ಯಾರಿಂದ ಮುದ್ರೆ ತೆಗೆದುಕೊಳ್ಳಬೇಕು ಎಂಬ ನಿರ್ಣಯ ಮಾಡುವ ಪ್ರಸಂಗ ಬಂದಿತಂತೆ. ಅವನು ವ್ಯಾಸರಾಜರ ಬಳಿ ಬಂದರೆ ವ್ಯಾಸರಾಜರು ನಮ್ಮ ಬಳಿ ವಿದ್ಯೆ ಇದೆ ಎಂದರಂತೆ. ಸುರೇಂದ್ರತೀರ್ಥರ ಬಳಿ ಬಂದರೆ

---

[5] ಸತ್ಯಾತ್ಮರಿಂದ ಆರಂಭಿಸಿ ಇತ್ತೀಚಿನವರೆಗೆ ಪುಸ್ತಕ ಬರೆಯುತ್ತಿರುವ ಎಲ್ಲರೂ ಅದನ್ನು ತಮ್ಮ ಪ್ರವಚನ ಮತ್ತು ಪುಸ್ತಕಗಳಲಲ್ಲಿ ಪರಮಪ್ರಮಾಣ ಎಂದೇ ಬರೆದಿದ್ದಾರೆ. ನೋಡಿ.

ಅವರೂ ಹಾಗೆಯೇ ಹೇಳಿದರಂತೆ. ಆ ನಂತರ ವೇದವ್ಯಾಸರ ಬಳಿ ಬಂದರೆ ನಮ್ಮ ಬಳಿ ಆ ಪ್ರತಿಮೆ ಇದೆ ಈ ಪ್ರತಿಮೆ ಇದೆ ಎಂದು ವೇದವ್ಯಾಸರು ಹೇಳಿ ಮತ್ತೊಂದು ಮಾತು ಹೇಳಿದರಂತೆ.

ವಿದ್ಯಾಸಂಪದ್ಧಿ ಸರ್ವತ್ರ
ವೇಶ್ಯಾಯಾಮಪಿ ವರ್ತತೇ
ಮುಖ್ಯಾ ಕೌಪೀನಸಂಶುದ್ಧಿಃ
ಸಂನ್ಯಾಸಿಗಣಮಂಡನಮ್

ವಿದ್ಯೆಯೆಂಬ ಸಂಪತ್ತು ಎಲ್ಲರ ಬಳಿಯೂ ಇರುತ್ತದೆ. ಸೂಳೆಯ ಬಳಿಯೂ ಇರುತ್ತದೆ. ಮುಖ್ಯವಾದದ್ದು ಕೌಪೀನಶುದ್ಧಿ. ಅದು ನಮ್ಮ ಬಳಿ ಇದೆ. ಪರೀಕ್ಷೆಗೂ ಸಿದ್ಧ ಎಂದರಂತೆ.

ತಮ್ಮ ಶಿಷ್ಯರಿಂದಲೇ ಒಂದು ಕುಂಡವನ್ನು ತರಿಸಿ ಅದರಲ್ಲಿ ಬೆಂಕಿ ಹೊತ್ತಿಸಿ ತಮ್ಮ ಕೌಪೀನವನ್ನು ಬಿಚ್ಚಿ ಅದರಲ್ಲಿ ಹಾಕಿ ತೆಗೆದರಂತೆ. ಕೌಪೀನ ಸುಡಲಿಲ್ಲವಂತೆ. ಅದೇ ಕೌಪೀನವನ್ನು ವೇದವ್ಯಾಸರು ಮತ್ತೆ ಧರಿಸಿದರಂತೆ.

ವೇದವ್ಯಾಸರು ಮಹಾನುಭಾವರು ಎಂದು ಸಿದ್ಧವಾಯಿತಂತೆ.

ಯಾವ ಲೆಕ್ಕವನ್ನು ಹಿಡಿದರೂ ವೇದವ್ಯಾಸರು ಶ್ರೀಮಚ್ಚಂದ್ರಿಕಾಚಾರ್ಯರ ಹಾಗೂ  ಶ್ರೀ ಸುರೇಂದ್ರತೀರ್ಥರ ದರ್ಶನವನ್ನು ಪಡೆಯಲು ಸಾಧ್ಯವಿಲ್ಲ. ವೇದವ್ಯಾಸರ ಗುರುಗಳಾದ ರಘೂತ್ತಮರಿಗೇ ಚಂದ್ರಿಕಾಚಾರ್ಯರ ದರ್ಶನವಾಗಿಲ್ಲ ಎಂದ ಬಳಿಕ ಅವರ ಶಿಷ್ಯರಿಗೆ ಆಗುವದು ಸುತರಾಂ ಸಾಧ್ಯವಿಲ್ಲ.

ಇದೇ ಉತ್ತರಾದಿ ಮಠದವರ ಲೆಕ್ಕದ ಪ್ರಕಾರ ವೇದವ್ಯಾಸರು ಪೀಠಕ್ಕೆ ಬಂದದ್ದೇ 1596ರಲ್ಲಿ. ಅಂದಮೇಲೆ 1539ರಲ್ಲಿ ನಿರ್ಯಾಣ ಹೊಂದಿದ ವ್ಯಾಸರಾಜರ ಜೊತೆಯಲ್ಲಿ ಕೌಪೀನಶುದ್ಧಿಯ ಸ್ಪರ್ಧೆಯೇ.

**ಕೌಪೀನಶುದ್ಧಿಯ ಕುರಿತು ಹೇಳಿಕೊಳ್ಳಬೇಕಾದ್ದು ಕೌಪೀನಧರಿಸಿದ ಯತಿಯಲ್ಲ. ಆ ಯತಿಯ ಗುರುಗಳು ಎನ್ನುವ ಕನಿಷ್ಠ ಜ್ಞಾನವೂ ಈ ಸುಳ್ಳು ಕಥೆ ಹುಟ್ಟಿಸಿದ ದೈವಜ್ಞ ಭೀಮನಿಗಿಲ್ಲ.**

**ಸಾಸಿರ ಜಿಹ್ವೆಯುಳ್ಳ ನರನೇ ಕೊಂಡಾಡಬೇಕು ವ್ಯಾಸರಾಯರ ಸಂನ್ಯಾಸದಿರಿವ** ಎಂದು ಗುರುಗಳಾದ ಶ್ರೀಪಾದರಾಜಗುರು-ಸಾರ್ವಭೌಮರಿಂದಲೇ ಶ್ಲಾಘಿತರಾದ,

ಹುಟ್ಟಿನಿಂದ ಹೆಣ್ಣಿನ ಸಂಪರ್ಕವಿಲ್ಲದ ಬ್ರಾಹ್ಮಣೋತ್ತಮ ಎಂದು ಒಬ್ಬ ಸಮಕಾಲೀನ ಪಾಶ್ಚಾತ್ಯನಿಂದ ಶ್ಲಾಘಿತರಾದ,

ತಾಯಿಯ ಎದೆಹಾಲನ್ನೂ ಕುಡಿಯದೇ, ಸಾಲಿಗ್ರಾಮದ ಅಭಿಷೇಕದ ಹಾಲನ್ನು ಕುಡಿದು ಬೆಳೆದ ಶ್ರೀಮಚ್ಚಂದ್ರಿಕಾಚಾರ್ಯ ಗುರುಸಾರ್ವಭೌಮರ ಕುರಿತು ಈ ರೀತಿ ಮಾತನಾಡುವದು ಸ್ವೋತ್ತಮದ್ರೋಹವಲ್ಲವೇ?

ಇಂತಹ ಪರಮನೀಚಕೃತಿ ಆ ಪೂರ್ಣಬೋಧವಂಶಕಥಾಕಲ್ಪತರು. ಶ್ರೀ ರಾಜೇಂದ್ರತೀರ್ಥಗುರುಸಾರ್ವಭೌಮರಿಂದ

ಆರಂಭಿಸಿ, ಶ್ರೀ ವರದೇಂದ್ರತೀರ್ಥರ ವರೆಗಿನ ಎಲ್ಲ ಮಹಾನುಭಾವರನ್ನು ನಿಂದಿಸಿದ ಕೃತಿ.

ಯಾರ ಗ್ರಂಥಗಳು ಮಧ್ವಸಿದ್ಧಾಂತಕ್ಕೆ ಅಭೇದ್ಯ ಕೋಟೆಯಂತಿವೆಯೋ ಆ ಗ್ರಂಥಗಳನ್ನು ಕರುಣಿಸಿದ, ಮುನಿತ್ರಯರಲ್ಲಿ ಸೇರಿದ ಶ್ರೀಮಚ್ಚಂದ್ರಿಕಾಚಾರ್ಯರ ವಿದ್ಯೆಯನ್ನು ಸೂಳೆಯರ ವಿದ್ಯೆಗೆ ಹೋಲಿಸಿದ ಆ ಕೃತಿಯನ್ನು ಪರಮನೀಚಕೃತಿಯೆನ್ನದೇ ಏನನ್ನಬೇಕು. ನೀವೇ ಹೇಳಿ.

ಮತ್ತೊಂದು ನೀಚಕೃತಿ ಸತ್ಕಥಾ. ಅದರಲ್ಲಿ ವಿಜಯಧ್ವಜರು ಅನ್ನಕ್ಕಾಗಿ ಪರಿತಪಿಸಿ ಹಂಪೆಯ ಬೀದಿಗಳಲ್ಲಿ ಮೂರು ಕಲ್ಲಿಟ್ಟು ಬೆಂಕಿ ಹೊತ್ತಿಸಿ ಅದರ ಮೇಲೆ ತಂಬಿಗೆ ಇಟ್ಟು ಅನ್ನ ಮಾಡಿಕೊಳ್ಳುತ್ತಿದ್ದರಂತೆ.

ಶ್ರೀ ವಿಜಯಧ್ವಜತೀರ್ಥಶ್ರೀಪಾದಂಗಳವರು ಪರಂಪರೆಯಲ್ಲಿ ಶ್ರೀ ವಿದ್ಯಾಧಿರಾಜತೀರ್ಥ ಶ್ರೀಪಾದಂಗಳವರು ಸಮಕಾಲೀನರು. ಇತಿಹಾಸದ ಜ್ಞಾನವೇ ಇಲ್ಲದ ಉತ್ತರಾದಿ

ಮಠದವರು ತಲೆಗೊಂದು ಕಥೆಯನ್ನು ಹುಟ್ಟಿಸಿ ಮಹಾನುಭಾವರಿಗೆ ಅಪಚಾರ ಮಾಡುತ್ತಲೇ ಬರುತ್ತಿದ್ದಾರೆ.

ಇವತ್ತಿಗೂ ಸತ್ಯಾತ್ಮರೂ ಅದೇ ಸುಳ್ಳುಕಥೆಗಳನ್ನು ಹೇಳುವದಷ್ಟೇ ಅಲ್ಲ, ವಿಷ್ಣುದಾಸಾಚಾರ್ಯರೇ ಕವೀಂದ್ರರು ಎಂಬ ಹೊಸ ಸುಳ್ಳು ಕಥೆಗಳನ್ನು ಸೃಷ್ಟಿಸುತ್ತ, ತಮ್ಮ ಹಿಂದಿನ ಗ್ರಂಥಗಳ ಅಪ್ರಾಮಾಣ್ಯವನ್ನು ಪ್ರತಿಪಾದಿಸುವ ತಮ್ಮ ಸಂಪ್ರದಾಯವನ್ನು ಮುಂದುವರೆಸಿದ್ದಾರೆ.

ಉತ್ತರಾದಿ ಮಠದ ದಾಖಲೆಗಳು ವಾಸುದೇವಶಾಸ್ತ್ರಿ ಎನ್ನುವದು ಶ್ರೀ ಕವೀಂದ್ರತೀರ್ಥರ ಪೂರ್ವಾಶ್ರಮದ ಹೆಸರು ಎಂದು ತಿಳಿಸುತ್ತವೆ. ಆದರೆ ಜಗತ್ತಿನ ದೊಡ್ಡವರೆಲ್ಲರೂ ತಮ್ಮವರೇ ಆಗಬೇಕು ಎಂಬ ಭ್ರಾಂತಿಯಲ್ಲಿರುವ ಈ ಜನ ಮಹಾಗ್ರಂಥಕಾರರಾದ ವಿಷ್ಣುದಾಸಾಚಾರ್ಯರೇ ಕವೀಂದ್ರತೀರ್ಥರು ಎಂಬ ಸುಳ್ಳುಕಥೆಯನ್ನು ಹುಟ್ಟಿಸಿದ್ದಾರೆ. ಆದರ ಖಂಡನೆಯನ್ನೂ ಮುಂದೆ ಮಾಡುತ್ತೇನೆ.

## ಉತ್ತರಾದಿಮಠದವರಿಗೊಂದು ಸ್ಪಷ್ಟ ಸೂಚನೆ

ನಾನೀಗ ಸತ್ಯಾತ್ಮರಿಗೆ ಪ್ರತಿಪಕ್ಷದವನಾಗಿ ನಿಂತಿದ್ದೇನೆ. ಮೊದಲು ಅವರ ಕುರಿತು ನನಗಿದ್ದ ಗೌರವ ಸೀಕರಣೆಯ ಪ್ರಸಂಗದ ನಂತರ ಉಳಿದಿಲ್ಲ. ಅವರ ಗುಂಪಿನವನಂತೂ ಎಂದಿಗೂ ಆಗಿರಲಿಲ್ಲ. ಇಂದಿಗೂ ಅಲ್ಲ.

ಸತ್ಯಾತ್ಮರ ಬಗ್ಗೆ ನಾನು ಮಾತನಾಡುವದು ಗುರುದ್ರೋಹ ಎಂದು ಆರಂಭಿಸಿ ನನ್ನನ್ನು ನಿಂದಿಸಲು ಆರಂಭಿಸುವ ಎಲ್ಲ ಸತ್ಯಾತ್ಮರ ಫೆನಟಿಕ್ ಶಿಷ್ಯರು ಮೊದಲು ಪೂರ್ಣಬೋಧ-ಕಥಾವಂಶಕಲ್ಪತರು, ಸತ್ಕಥಾ ಮುಂತಾದ ಉತ್ತರಾದಿ ಮಠದ ನೂರಾರು ಪುಸ್ತಕಗಳಲ್ಲಿ, ಸತ್ಯಾತ್ಮರ ಪ್ರವಚನಗಳಲ್ಲಿ ಇರುವ ಗುರುದ್ರೋಹದ ಮಾತುಗಳನ್ನು ಕಂಡು ಆ ಬಳಿಕ ನನ್ನ ಕುರಿತು ಮಾತನಾಡಿ.

ಗುರುಗಳ ಮಾತಿಗೆ ಬೆಲೆ ಕೊಡಬೇಕು ಎಂದು ಹೇಳುವ ಮಂದಿ ಸತ್ಯಪರಾಕ್ರಮರು ಹೇಳಿರುವ —

**ಯದ್ಧಸ್ತೋದಕಪಾವನೌದನಮಹೋ ಸಚ್ಛಾಂತಿಸಂತಾನದಮ್** ಎಂಬ ವೃಂದಾವನಸ್ಥಯತಿಗಳ ಹಸ್ತೋದಕ ಪಾದೋದಕಗಳನ್ನು ಸ್ವೀಕಾರ ಮಾಡಬೇಕು ಎಂಬ ವಚನಕ್ಕೆ ಸತ್ಯಾತ್ಮರು ಯಾಕೆ ಗೌರವ ನೀಡುವದಿಲ್ಲ ಎನ್ನುವದಕ್ಕೆ ಉತ್ತರ ಪಡೆದು ಆ ನಂತರ ಮಾತನಾಡಲು ಬನ್ನಿ.

ಉತ್ತರಾದಿಮಠದವರು ಮೊದಲು ಸತ್ಯಪರಾಕ್ರಮರ ವಚನಕ್ಕೆ ಗೌರವ ನೀಡಲಿ. ಆ ನಂತರ ಉಳಿದವರಿಗೆ ಗುರುಭಕ್ತಿಯ ಪಾಠವನ್ನು ಹೇಳಲಿ.

**ಸತ್ಯಾತ್ಮರ ಕುರಿತು ಗೌರವವಿದ್ದ ಕಾರಣಕ್ಕಾಗಿ ಸೀಕರಣೆಯ ಪ್ರಸಂಗದಲ್ಲಿ ಮಾತನಾಡದೇ ಹಿಂದೆ ಸರಿದಿದ್ದೆ. ಆದರೆ ಮಾಧ್ವಪರಂಪರೆಯ ಜೀವಾಳವಾದ ಶ್ರೀವ್ಯಾಸರಾಜಗುರುಸಾರ್ವಭೌಮರ ನಿಂದೆಯಾದ ಬಳಿಕ ಸುಮ್ಮನೆ ಕುಳಿತರೆ ನಾನು ಬದುಕಿರುವದೇ ವ್ಯರ್ಥ.**

ಶ್ರೀಮದ್ ವ್ಯಾಸರಾಜಗುರುಸಾರ್ವಭೌಮರಿಗೆ ಅವಮಾನವಾದಾಗ ಅದನ್ನು ಖಂಡಿಸದೇ ಆರಾಧನೆ ಮಾಡಿ ಊಟ ಮಾಡಿ ಏನು ಪ್ರಯೋಜನ?

ನನ್ನ ಮಾನ, ಪ್ರಾಣಗಳನ್ನು ಪಣಕ್ಕಿಟ್ಟು ನಮ್ಮ ಮಾಧ್ವಪರಂಪರೆಯ ಭೂಷಾಮಣಿಗಳ ಗೌರವವನ್ನು ರಕ್ಷಿಸುವ ಸೌಭಾಗ್ಯದ ಕಾರ್ಯಕ್ಕಾಗಿ ಸಿದ್ಧನಾಗಿದ್ದೇನೆ.

ಇದು ಆರಂಭವಷ್ಟೇ…

ನೂರೂರು ಸುಳ್ಳುಗಳಿಂದ ಬೆಳೆದು ನಿಂತಿರುವ ಅವರ ಅಸತ್ಯವೃಕ್ಷವನ್ನು ಕಡಿದು ನೆಲಕ್ಕೆ ಬೀಳಿಸುವವರೆಗೆ ಈ ವಾಕ್ಸಮರ ಮುಂದುವರೆಯುತ್ತದೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ